ಹುಬ್ಬಳ್ಳಿ ಪಡಿತರ ದಾರರಿಗೆ ಸೀಮೆಎಣ್ಣೆ ವಿತರಣೆ

2933:(4030)

ಶ್ರೀ ಅಶೋಕ್ ಎಸ್.ಕಾಟ್‌ವ (ಹುಬ್ಬಳ್ಳಿ): ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ಶಹರದಲ್ಲಿರುವ ಪಡಿತರ ಅಂಗಡಿಗಳ ಒಟ್ಟು ಸಂಖ್ಯೆ ಎಷ್ಟು; ಪಡಿತರ ವಸ್ತುಗಳನ್ನು ಕಾರ್ಡು ದಾರರಿಗೆ ಪ್ರತಿ ತಿಂಗಳು ಸರಿಯಾಗಿ ವಿತರಸಲಾಗುತ್ತದೆಯೇ?

ಆ) ಹುಬ್ಬಳ್ಳಿ ಶಹರದಲ್ಲಿ ಪ್ರತಿ ತಿಂಗಳು ಬಿಡುಗಡೆಯಾಗುವ ಸೀಮೆಎಣ್ಣೆ ಪ್ರಮಾಣ ಎಷ್ಟು; ಹಾಕರ್ಸ್ ಇದ್ದಾರೆ, ಇವರು ಕಾರ್ಡುದಾರರಿಗೆ ಸೀಮೆಎಣ್ಣೆ ಸರಿಯಾಗಿ ವಿತರಿಸುತ್ತಿರುವುದಿಲ್ಲ ಅಂತ ಸಾರ್ವಜನಿಕರಿಂದ ತಕರಾರುಗಳು ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ ಆ ಬಗ್ಗೆ ಕೈಗೊಂಡ ಕ್ರಮವೇನು?

ಶ್ರೀ ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) ಹುಬ್ಬಳ್ಳಿ ಶಹರದಲ್ಲಿ ಒಟ್ಟು 167 ಪಡಿತರ ಅಂಗಡಿಗಳಿವೆ. ಹಾಗೂ ಪ್ರತಿ ತಿಂಗಳು ಕಾರ್ಡುದಾರರಿಗೆ ಪಡಿತರ ವಸ್ತುಗಳು ಸರಿಯಾಗಿ ವಿತರಣೆಯಾಗುತ್ತಿವೆ.

ಆ) ಹುಬ್ಬಳ್ಳಿ ಶಹರಕ್ಕೆ ಪ್ರತಿ ತಿಂಗಳೂ ಎಂ.ಕೆ.ಎಲ್. ಸೀಮೆಎಣ್ಣೆ ಬಿಡುಗಡೆಯಾಗುತ್ತಿದೆ. ಕಾರ್ಡುದಾರರಿಗೆ ಹಾಕರ್ಸ್ ಸೀಮೆಎಣ್ಣೆ ಸರಿಯಾಗಿ ವಿತರಿಸುತ್ತಿಲ್ಲ ಅಂತ ತಕರಾರುಗಳು ಬಂದ ಕಡೆ ಅಂತಹವರ ವಿರುದ್ಧ ಕ್ರಮ ಜರುಗಿಸಲಾಗುತ್ತಿದೆ.

ಹುಬ್ಬಳ್ಳಿ ಶಹರದಲ್ಲಿ ಪ್ರಧಾನ ಮಂತ್ರಿಗಳ ರೋಜ್‌ಗಾರ್ ಯೋಜನೆ ಅನುಷ್ಠಾನ

2934:(4031)

ಶ್ರೀ ಅಶೋಕ್ ಎಸ್.ಕಾಟ್‌ವೆ (ಹುಬ್ಬಳ್ಳಿ): ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1998ನೇ ಸಾಲಿನಲ್ಲಿ ಪ್ರಧಾನ ಮಂತ್ರಿಗಳ ರೋಜ್‌ಗಾರ್ ಯೋಜನೆಯಲ್ಲಿ ಹುಬ್ಬಳ್ಳಿ ಶಹರಕ್ಕೆ ಸಂಬಂಧಿಸಿದಂತೆ ನಿರುದ್ಯೋಗಿ ಅಭ್ಯರ್ಥಿಗಳಿಂದ ಬಂದ ಅರ್ಜಿಗಳ ಒಟ್ಟು ಸಂಖ್ಯೆ ಎಷ್ಟು?

ಆ) ಆಯ್ಕೆ ಸಮಿತಿಯಲ್ಲಿ ಜನಪ್ರತಿನಿಧಿಗಳನ್ನು ನಿಯಮಿಸಲು ಬರುವುದಿಲ್ಲವೆ?

ಸಿ) ಮಂಜೂರಾದ ಅರ್ಜಿಗಳನ್ನು ವಿವಿಧ ರಾಷ್ಟ್ರೀಕೃತ ಬ್ಯಾಂಕುಗಳಿಗೆ ಕಳುಹಿಸುತ್ತಿದ್ದು ಇದರಲ್ಲಿ ಅರ್ಹ ಫಲಾನುಭವಿಗಳಿಗೆ ಸಾಲ ಮಂಜೂರು ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದರೆ ಏನು ಕ್ರಮ ಜರುಗಿಸಲಾಗಿದೆ?

ಶ್ರೀ ಬಿ.ಎ.ಮೊಯಿಯುದ್ದೀನ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು):

ಅ) ಹುಬ್ಬಳ್ಳಿ ಶಹರನಿಂದ 1998ನೇ ಸಾಲಿನಲ್ಲಿ ಪ್ರಧಾನ ಮಂತ್ರಿಗಳು ರೋಜ್‌ಗಾರ್ ಯೋಜನೆ ಅಡಿ 1725 ಅರ್ಜಿಗಳು ಬಂದಿರುತ್ತವೆ.

ಆ) ಆಯ್ಕೆ ಸಮಿತಿಯನ್ನು ಕೇಂದ್ರ ಸರ್ಕಾರದ ಆದೇಶದನ್ವಯ ರಚಿಸಲಾಗಿರತ್ತುದೆ. ಸದರಿ ಸಮಿತಿಯಲ್ಲಿ ಜನಪ್ರತಿನಿಧಿಗಳನ್ನು ನೇಮಿಸಲು ಅವಕಾಶವಿರುವುದಿಲ್ಲ.

ಇ) ಗುರಿ ಅನುಗುಣವಾಗಿ 2 ಪಟ್ಟು ಅರ್ಜಿಗಳನ್ನು ಟಾಸ್ಕ್‌ಫೋರ್ಸ್ ಸಮಿತಿಯಿಂದ ಆಯ್ಕೆ ಮಾಡಿ ಬ್ಯಾಂಕಿಗೆ ಮಂಜೂರಾತಿಗಾಗಿ ಅರ್ಜಿಗಳನ್ನು ಕಳುಹಿಸಲಾಗುತ್ತದೆ. ಅರ್ಹ ಫಲಾನುಭವಿಗಳಿಗೆ ಬ್ಯಾಂಕಿನವರು ಸಾಲ ನೀಡುವುದನ್ನು ತಿರಸ್ಕರಿಸುವ ವಿಷಯವು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಒಂದು ವೇಳೆ ಅರ್ಹ ಅರ್ಜಿಗಳನ್ನು ಮುಂದಿನ ವರ್ಷದ ಗುರಿಯಲ್ಲಿ ಪರಿಗಣಿಸಲಾಗುತ್ತದೆ. ಆದ್ದರಿಂದ ಎಲ್ಲ ಅರ್ಹ ಅರ್ಜಿಗಳನ್ನು ಪರಿಗಣಿಸಲಾಗುತ್ತದೆ.

ಹುಬ್ಬಳ್ಳಿ ಶಹರದಲ್ಲಿ ಹೊಸ ಪಡಿತರ ಚೀಟಿಗಳ ವಿತರಣೆ.

2935:(4032)

ಶ್ರೀ ಅಶೋಕ್ ಎಸ್.ಕಾಟ್‌ವೆ (ಹುಬ್ಬಳ್ಳಿ): ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ದಯವಿಟ್ಟು ಉತ್ತರಿಸುವರೆ?

ಅ) ಹೊಸ ಪಡಿತರ ಚೀಟಿಗಳು ಕೊಡಲು ಪ್ರಾರಂಭವಾದಾಗಿನಿಂದ ಹುಬ್ಬಳ್ಳಿ ಶಹರದಲ್ಲಿ ಹೊಸ ಪಡಿತರ ಚೀಟಿಗಳಿಗಾಗಿ ಇಲ್ಲಿಯವರೆಗೂ ಒಟ್ಟು ಎಷ್ಟು ಅರ್ಜಿಗಳನ್ನು ಸ್ವೀಕರಿಸಲಾಗಿದೆ; ಹಾಗೂ ಒಟ್ಟು ಎಷ್ಟು ಪಡಿತರ ಚೀಟಿಗಳನ್ನು ವಿತರಿಸಲಾಗಿದೆ;

ಆ) ಅನಕ್ಷರತೆಯಿಂದ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ನೋಂದಾಯಿಸದೇ ಸುಮಾರು 4 ರಿಂದ 5 ವರ್ಷಗಳಿಂದಲೇ ವಾಸವಾಗಿರುವ